

# ಸೆಲ್ಫಿ ಮೂಡ್‌ನಲ್ಲಿ 'ಗೋಧ್ರಾ'

ಕಳೆದ ವರ್ಷ ನೀನಾಸಂ ಸತೀಶ್ ಅವರ 'ಗೋಧ್ರಾ' ಎಂಬ ಒಂದು ಸಿನಿಮಾ ಸೆಟ್ಟೇರಿದಾಗ ಇದು ಗೋಧ್ರಾ ಹತ್ಯಾಕಾಂಡದ ಕುರಿತಾದ ಸಿನಿಮಾನಾ ಎಂದು ಕೇಳಿದವರೇ ಹೆಚ್ಚು. ಆದರೆ 'ಇದು ಕೋಮುಗಲಬೆಯ ಕಥೆ ಇರುವ ಚಿತ್ರ ಅಲ್ಲ; ಬದಲಾಗಿ ನವಿರು ಪ್ರೇಮಕಥೆ ಇಲ್ಲಿದೆ' ಎಂದು ಸ್ಪಷ್ಟನೆ ಕೊಟ್ಟಿತ್ತು ಚಿತ್ರತಂಡ. ಹೊಸ ಹುಡುಗರ ತಂಡ ಸೇರಿಕೊಂಡು ರೂಪಿಸುತ್ತಿರುವ ಈ ಚಿತ್ರಕ್ಕೆ ನಂದೀಶ್ ಆ್ಯಕ್ಷನ್–ಕಟ್ ಹೇಳಿದ್ದಾರೆ.

'ಗೋಧ್ರಾ' ಸಿನಿಮಾದ ಫಸ್ಟ್ ಲುಕ್ ಕುತೂಹಲ ಕೆರಳಿಸಿತ್ತು. ಕಪ್ಪು ಕಂಬಳಿಯನ್ನು ಮುಖದ ಮೇಲೆ ಹೊದ್ದುನಿಂತಿರುವ ನೀನಾಸಂ ಸತೀಶ್ ಅವರ ಚಿತ್ರವೇ ಕಥೆಯ ಕುರಿತು ಮನಸಲ್ಲಿ ಆಸಕ್ತಿಯ ಒಗ್ಗರಣೆ ಹಾಕುವ ಹಾಗಿತ್ತು.

ಸುಬ್ರಹ್ಮಣ್ಯದಿಂದ ಶುರುವಾಗಿ ಉತ್ತರ ಭಾರತದವರೆಗೂ ಹಬ್ಬಿಕೊಳ್ಳುವ ಕಥೆಯನ್ನು ಪ್ರಯೋಗಾತ್ಮಕವಾಗಿ ತೆರೆಯ ಮೇಲೆ ತರಲು ಸಿದ್ಧತೆ ನಡೆಸಿದ್ದಾರೆ ನಂದೀಶ್. ನೀನಾಸಂ ಸತೀಶ್ ಜತೆಗೆ ಶ್ರದ್ಧಾ ಶ್ರೀನಾಥ್ ತೆರೆಯನ್ನು ಹಂಚಿಕೊಂಡಿದ್ದಾರೆ. ವಸಿಷ್ಠ ಸಿಂಹ ಮತ್ತು ಅಚ್ಯುತ್ ಕುಮಾರ್ ಕೂಡ ಈ ಚಿತ್ರದ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಕ್ಷಾ ಸೋಮಶೇಖರ್ ಅವರು ವಸಿಷ್ಠ ಅವರಿಗೆ ಜೋಡಿ.

ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ಚಿತ್ರೀಕರಣ ಮುಗಿಸಿರುವ ತಂಡ, ಒಟ್ಟಾಗಿ ಸಂಭ್ರಮದಿಂದ ಸೆಲ್ಫಿ ತೆಗೆದುಕೊಂಡಿದೆ. ಜೊತೆಗೆ ಪುಟ್ಟ ವಿಡಿಯೊ ಮಾಡಿ 'ಚಿಯರ್ಸ್' ಎಂದಿದೆ. ಈ ಸುದ್ದಿಯನ್ನು ಸತೀಶ್ ಅವರೇ ಹಂಚಿಕೊಂಡಿದ್ದಾರೆ. ನಿರ್ದೇಶಕ ನಂದೀಶ್, ಸತೀಶ್, ಶ್ರದ್ಧಾ ಶ್ರೀನಾಥ್ ಜೊತೆಗೆ ಚಿತ್ರತಂಡದ ಹಲವರು ನದಿಯ ಪಾತ್ರದಂತೆ ತೋರುವ ಬಯಲು ಜಾಗದಲ್ಲಿ ನಿಂತು ಫೋಟೊ ತೆಗೆದುಕೊಂಡಿದ್ದಾರೆ.

# ಧ್ರುವ ಸರ್ಜಾಗೆ ರಶ್ಮಿಕಾ ಪ್ರೇಮಪಾಠ

'ಕನಸಲ್ಲಿ (ಅರೆರೆರೆರೆ...) ಬಳಿ ಬಂದು (ಅಲೆಲೆಲೆಲೆ...) ಮುದ್ದಾಡಿ (ಅಯ್ಯಯ್ಯಯ್ಯಯ್ಯೊ...) ಕಚಗುಳಿ ತಾಳಲಾರೆ' ಎಂದು ಹರೆಯದವರು ಎದೆಯೊಳಗೇ ಮುಲಮುಲ ಮುಲುಕಾಟ ಎಬ್ಬಿಸಿದ ಚೆಲುವೆ ರಶ್ಮಿಕಾ ಮಂದಣ್ಣ. ಆದರೆ 'ಕಿರಿಕ್ ಪಾರ್ಟಿ'ಯ ಪ್ರೇಮಗೀತೆ ಬದುಕಿನಲ್ಲಿಯೂ ರಿಂಗಣಿಸಿ ರಕ್ಷಿತ್ ಜೊತೆ ಉಂಗುರ ಬದಲಾಯಿಸಿಕೊಂಡಾಗ ಅದೇ ಹುಡುಗರ ಎದೆ ಒಮ್ಮೆ ವಿಲವಿಲ ಅಂದಿದ್ದೂ ಅಷ್ಟೇ ಸತ್ಯ. ಆ ನಿಶ್ಚಿತಾರ್ಥ ಕೆಲವೇ ದಿನಗಳಲ್ಲಿ ಮುರಿದುಹೋಯ್ತು. ತೆಲುಗಿನ 'ಗೀತಗೋವಿಂದ' ಚಿತ್ರದ ಭರ್ಜರಿ ಯಶಸ್ಸಿನ ನಂತರ ರಶ್ಮಿಕಾ ಮಂದಣ್ಣ ಮತ್ತೆ ಕನ್ನಡದ ಕಡೆಗೆ ಹೊರಳಿ ನೋಡೋದಿಲ್ಲ ಎಂಬ ಹಲವರ ಊಹೆ ತಪ್ಪಾಗುವಂತೆ ಅವರು ಧ್ರುವ ಸರ್ಜಾ ಜತೆ 'ಪೊಗರು' ಚಿತ್ರದಲ್ಲಿ ತೆರೆ ಹಂಚಿಕೊಳ್ಳಲು ಒಪ್ಪಿಕೊಂಡಿದ್ದರು.

'ಪೊಗರು' ಚಿತ್ರಕ್ಕೋಸ್ಕರ ಉದ್ದ ಗಡ್ಡ ಬಿಟ್ಟು, ಧ್ರುವ ಪಕ್ಕಾ ಮಾಸ್ ಹುಡುಗನ ಅವತಾರ ತಳೆದಿದ್ದರು. ಹಾಗಿದ್ದರೆ ಕುಸುಮಕೋಮಲೆ ರಶ್ಮಿಕಾ ಪಾತ್ರ ಹೇಗಿರಬಹುದು ಎಂಬ ಕುತೂಹಲ ಇದ್ದೇ ಇತ್ತು. ಈಗ ಆ ಕುತೂಹಲಕ್ಕೆ ಉತ್ತರ ಸಿಕ್ಕಿದೆ. 'ಕಿರಿಕ್ ಪಾರ್ಟಿ'ಯಲ್ಲಿ ಪರಮ ಮುಗ್ಧೆ ಹುಡುಗಿಯಾಗಿ ಕಾಣಿಸಿಕೊಂಡಿದ್ದ ರಶ್ಮಿಕಾ, 'ಪೊಗರು'ವಿನಲ್ಲಿ ಲೆಕ್ಚರರ್ ಅಂತೆ. ಹಾಗಿದ್ದರೆ ಕಿರಿಕ್ ಪಾರ್ಟಿಯ ಕನ್ನಡಕವನ್ನು ಅವರು ಇಲ್ಲಿಯೂ ಬಳಸಬಹುದು! 'ರಶ್ಮಿಕಾ ಈ ಚಿತ್ರದಲ್ಲಿ ಕಾಲೇಜು ಉಪನ್ಯಾಸಕಿ ಪಾತ್ರದಲ್ಲಿ ನಟಿಸುತ್ತಿದ್ದಾರೆ' ಎಂದು ಒಂದೇ ಸುಳಿವನ್ನು ಚಿತ್ರತಂಡ ಬಿಟ್ಟುಕೊಟ್ಟಿದೆ. ಹಾಗಿದ್ದರೆ ಧ್ರುವ ಸರ್ಜಾ ಪೋಕರಿ ವಿದ್ಯಾರ್ಥಿ ಆಗಿರುತ್ತಾರಾ ಎಂದು ಕೇಳಿದರೆ ಅದು ನಿಮ್ಮ ಊಹೆಗೆ ಬಿಟ್ಟಿದ್ದು. ವಿದ್ಯಾರ್ಥಿ ಆಗುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ಒರಟು ಹುಡುಗನಿಗೆ ರಶ್ಮಿಕಾ ತೆರೆಯ ಪ್ರೇಮದ ಪಾಠವನ್ನು ಮಾಡುವುದಂತೂ ಖಚಿತ.

ದರ್ಶನ್ ಅಭಿನಯದ 'ಯಜಮಾನ' ಚಿತ್ರದಲ್ಲಿಯೂ ರಶ್ಮಿಕಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಜತೆಗೆ ತೆಲುಗಿನ ವಿಜಯ ದೇವರಕೊಂಡ ಅವರ ಜತೆ ಇನ್ನೊಂದು ಸಿನಿಮಾದಲ್ಲಿಯೂ ಅವರು ಬಿಜಿಯಾಗಿದ್ದಾರೆ.



★ ಚಿತ್ರ: ಕೆ.ಎನ್. ನಾಗೇಶ್‌ಕುಮಾರ್